9. ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ 2000.

ಮಂಡನೆಗೆ ವಿರೋಧ ಪಕ್ಷದವರಿಂದ ವಿರೋಧ ಹಾಗೂ ಧರಣಿ.

ಅಧ್ಯಕ್ಷರು: ಇನ್ನು ನಾಲ್ಕೈದು ಜನ ನುಸಿ ರೋಗದ ಬಗ್ಗೆ ಮಾತನಾಡುವವರು ಇದ್ದಾರೆ. ನಾಳೆಯ ದಿವಸ ಇದೇ ವಿಷಯದ ಮೇಲೆ ಮಾತನಾಡುವುದಕ್ಕೆ 2 ಗಂಟೆ ಕಾಲಾವಕಾಶ ಕೊಡುತ್ತೇನೆ.

ಈಗ 8-10 ಜನ ಎದ್ದು ನಿಂತು ಮಾತನಾಡಬೇಕೆಂದು ಹೇಳಿದರೆ ಹೇಗೆ? ಈಗ 7-00 ಗಂಟೆಯೊಳಗೆ ಮುಗಿಸುವುದಾದರೆ ಮಾತನಾಡಿ. ಇದನ್ನು ನಾಳೆ ತೆಗೆದುಕೊಂಡರೆ ಏನಾಗುತ್ತದೆ? ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಯವರು ಬಿಲ್ಲನ್ನು ಮೂವ್ ಮಾಡಿ.

SRI P.G.R.SINDHIA: Before the motion is moved. ಮಾನ್ಯ ಅಧ್ಯಕ್ಷರೆ, ರೈತರ ಜ್ವಲಂತ ಸಮಸ್ಯೆ ಆಗಿರತಕ್ಕಂಥ ನುಸಿರೋಗದ ಬಗ್ಗೆ ನಾಳೆ ಪುನಃ ಚರ್ಚೆಯನ್ನು ಮಾಡಲಿಕ್ಕೆ ಎರಡು ತಾಸು ಅವಕಾಶವನ್ನು ಮಾಡಿಕೊಡುತ್ತೇನೆ ಎನ್ನುವ ತೀರ್ಮಾನವನ್ನು ತಾವು ಕೊಟ್ಟಿದ್ದೀರಿ. ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು

ಅಧ್ಯಕ್ಷರು: ಅವರು ಮೋಷನ್ ಮೂವ್ ಮಾಡಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಅಜೆಂಡಾದಲ್ಲಿ ಇದೆಯಲ್ಲಾ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಮ್ಮ ಬಗ್ಗೆ ಹಾಗೂ ಮಾನ್ಯ ಸಚಿವರ ಬಗ್ಗೆ ಬಹಳ ಗೌರವ ಇದೆ. ದಯವಿಟ್ಟು ರೂಲ್ಸ್ ಆಫ್ ಪ್ರೊಸೀಜರ್‌ನ್ನು ಫಾಲೊ ಮಾಡಬೇಕು ಎಂದು ಸಂಬಂಧಿಸಿದ ಮಂತ್ರಿಗಳೇ ಹೇಳಿದ್ದಾರೆ.

ಅಧ್ಯಕ್ಷರು: ಸಬ್ಜೆಕ್ಟ್ ಇಲ್ಲದೆಯೇ ನೀವು ಏನು ರೂಲ್ಸ್ ಆಫ್ ಪ್ರೊಸೀಜರ್ ಹೇಳುತ್ತಿದ್ದೀರಿ? ಅವರು ಮೋಷನ್ ಮೂವ್ ಮಾಡಿಲ್ಲ. ಅವರು ಮೂವ್ ಮಾಡಿದ ಮೇಲೆ ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಕನ್ಸಿಡರೇಷನ್ಸ್ ಸ್ಟೇಜ್‌ನಲ್ಲಿ ಮಾತನಾಡುವುದು ಅದು ಬೇರೆ ವಿಚಾರ. ದಯಮಾಡಿ ನನಗೆ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಿ. ನಾನು ಕನ್‌ವಿನ್ಸ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ನೀವು ಸಬ್‌ಮಿಟ್ ಮಾಡುವುದಕ್ಕೆ, ಕನ್ವಿನ್ಸ್ ಮಾಡುವುದಕ್ಕೆ ಯಾವ ಸಬ್ಜೆಕ್ಟ್ ಮೇಲೆ ನೀವು ಸಬ್‌ಮಿಟ್ ಮಾಡುತ್ತೀರಿ? ನಮ್ಮ ಮುಂದೆ ಸಬ್ಜೆಕ್ಟ್ ಇಲ್ಲವಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಬಿಲ್ಲನ್ನು ನೆನ್ನೆಯೇ ಸರ್ಕ್ಯುಲೇಟ್ ಮಾಡಿದ್ದಾರೆ. ಬಿಲ್ಲಿನ ಸದುದ್ದೇಶಗಳನ್ನು ನಾವು ಓದಿದ್ದೇವೆ. ಆದ್ದರಿಂದ, ಇಡೀ ಸದನ ಪರಾಮರ್ಶಿಸಬೇಕು ಎನ್ನುವ ದೃಷ್ಟಿಯಿಂದಾಗಿ ಕನ್ಸಿಡರೇಷನ್ ತೆಗೆದುಕೊಳ್ಳುವುದಕ್ಕೆ ಮುಂದೆ ಇಂಟ್ರಡಕ್ಷನ್ ಮಾಡುವುದಕ್ಕೆ ಹೊರಟಿದ್ದಾರೆ. ಇಂಟ್ರಡಕ್ಷನ್ ಸ್ಟೇಜ್‌ನಲ್ಲಿ ಇರತಕ್ಕಂಥ ನಮ್ಮ ತಗಾದೆಯನ್ನು ಹೇಳಿ ಆದಮೇಲೆ ನಾವು ಯಾವುದೇ ರೀತಿ ಆಡ್ಡಿಪಡಿಸುವುದಿಲ್ಲ.

SRI D.B.CHANDRE GOWDA: You can only question the legislative competence of this House.. You can raise your objections after introduction. I will draw your attention to one point. If the motion for leave to introduce the bill is opposed, the Speaker may permit, if he thinks fit, a brief explanatory statement from the member who opposes and a brief reply from the mover, and shall then, without further debate, put the question.." Whether the motion is opposed on the ground that the Bill initiates legislation outside the legislative competence of this House? There cannot be any objection on the legislative competence. But the hon.member has got every right to oppose once the motion is moved.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ರೂಲ್ಸ್ ಬುಕ್‌ನ ಪುಟ ಸಂಖ್ಯೆ 32 ರಲ್ಲಿನ ರೂಲ್ 81ನ್ನು ಈಗ ಓದುತ್ತೇನೆ. ಅದು ಏನು ಹೇಳುತ್ತದೆ ಎಂದರೆ,

"on the motion for leave to introduce a Bill, the mover may make a brief explanatory statement. If the motion is opposed, the speaker may permit a brief explanatory statement from the member who opposes and a brief reply from the mover, and shall then, without

further debate, put the question thereon." ಈ ಒಂದು ರೂಲ್ 81ರ ಪ್ರಕಾರವಾಗಿ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿ ನಾನು ರೂಲ್ಸ್ ಆಫ್ ಪ್ರೊಸೀಜರ್ ಬಗ್ಗೆ ಕೌಲ್ ಅಂಡ್ ಶಕ್ದರ್‌ರವರು ಬರೆದಿರುವ ಪುಸ್ತಕದ ಪುಟ ಸಂಖ್ಯೆ 492 ರಲ್ಲಿ ಹೇಳಿರುವುದನ್ನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಅಲ್ಲಿ ಏನು ಹೇಳಿದೆ ಎಂದರೆ, "A Minister who desires to intorduce a Bill has to give seven days notice in writing of his intention to move for leave to introduce the Bill" ಅಂದರೆ ಇವತ್ತು 21ನೇ ತಾರೀಖು. ಏಳು ದಿವಸಗಳ ಹಿಂದೆ ಮಾನ್ಯ ಮಂತ್ರಿಗಳು ಮಸೂದೆ ಮಂಡಿಸುವ ಬಗ್ಗೆ ಮಾನ್ಯ ಅಧ್ಯಕ್ಷರಿಗೆ ಅನುಮತಿ ಕೋರಿ ಪತ್ರ ಬರೆದಿದ್ದಾರೆಯೇ? ಆ ರೀತಿ ಪತ್ರ ಬರೆದಿದ್ದಾರೆ ಎಂದು ಮಾನ್ಯ ಅಧ್ಯಕ್ಷರು ಹೇಳಿದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಕೌಲ್ ಅಂಡ್ ಶಕ್ದರ್ ಬರೆದಿರುವ ಪುಸ್ತಕದಲ್ಲಿರುವುದನ್ನು ನಾನು ಉಲ್ಲೇಖಿಸುತ್ತಿದ್ದೇನೆ. ಅದನ್ನು ಬಿಟ್ಟು ಬೇರೆ ಏನನ್ನೂ ನಾನು ಹೇಳುತ್ತಿಲ್ಲ.

"The speaker may, however, allow the motion for leave to be made at shorter notice."

ಮತ್ತೆ 124ರಲ್ಲಿ ಎರಡು ದಿವಸ ಸಾಕು ಎಂದು ಹೇಳುತ್ತಾರೆ. ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ? ನಿನ್ನೆ ಇದನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಇದ್ರೆ ನಿನ್ನೆ ಇಷ್ಟು ಹೊತ್ತಿನಲ್ಲಿ ಇದನ್ನೆಲ್ಲಾ ಸರ್ಕ್ಯುಲೇಟ್ ಮಾಡಿದ್ರಾ? 24 ಗಂಟೆಯಾಗಿದೆ, ಅಂದರೆ ಒಂದು ರಾತ್ರಿಯಾಗಿರುವುದರಿಂದ ಎರಡು ದಿನವಾಗಿದೆ ಎನ್ನತಕ್ಕಂತಹ ನೆಪವನ್ನೂ ಸಹಿತ ನೀವು ಒಡ್ಡಬಹುದು. ಏಳು ದಿನಗಳು ಆಗಿಲ್ಲದಿದ್ದರೆ, ಮಾನ್ಯ ಅಧ್ಯಕ್ಷರು ಏಳು ದಿನಗಳ ಮುಂಚೆ ನೋಟೀಸ್ ಕೊಡುವುದನ್ನು ಮನ್ನಾ ಮಾಡಿ ಕೇವಲ ಎರಡು ದಿವಸಗಳಲ್ಲಿ ಇದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಅನುಮತಿ ನೀಡಿದ್ದಾರಾ? ಮತ್ತೊಂದು ಅಂಶ ಏನೆಂದರೆ, in page 493,

"A bill is not included in the list of business for introduction until copies of the bill have been made available to all the members, at least two days before the date on which it is proposed to be introduced"

proposed to be introduced and not proposed to be considered. ಎರಡು ದಿವಸಗಳ ಮುಂಚೆ ಮಾಡಬೇಕಾಗಿತ್ತು. ಈ ಪ್ರೊಸೀಜರ್ ಅನ್ನು ಹೇಳಬೇಕೆಂದು ನಾವು ಹೊರಟರೆ ಅದಕ್ಕೆ ಅಡ್ಡಿಪಡಿಸಿದರೆ ಹೇಗೆ? ಮಾನ್ಯ

ಮಂತ್ರಿಗಳಾದ ಘೋರ್ಪಡೆಯವರ ಬಗ್ಗೆ ಈ ಸದನದಲ್ಲಿರತಕ್ಕ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರೆಲ್ಲರಿಗೂ ಸಹಿತ ಅಪಾರವಾದ ಗೌರವ ಇದೆ. ನಾವು ಈ ಸರ್ಕಾರವನ್ನೇನೋ ಬಹಳ ದೊಡ್ಡ ಅಪರಾಧವನ್ನು ನೀವು ಮಾಡಿದ್ದೀರಿ ಎನ್ನತಕ್ಕಂಥ ದೃಷ್ಟಿಯಲ್ಲಿ ನೋಡಿ ಇದುವರೆಗೂ ಆ ರೀತಿಯಲ್ಲಿ ಆಪಾದನೆ ಮಾಡುವುದಕ್ಕೆ ಹೋಗಿಲ್ಲ. ಮಾನ್ಯ ಮಂತ್ರಿಗಳ ಬಗ್ಗೆ ನಾವೆಲ್ಲರೂ ಸಹಿತ ಅತ್ಯಂತ ಹೆಚ್ಚಿನ ಗೌರವವನ್ನು ಇಟ್ಟುಕೊಂಡಿರುತ್ತೇವೆ. ಆದರೆ ಇವತ್ತು ತಾವು ಇಂಟ್ರಡ್ಯೂಸ್ ಮಾಡುತ್ತಿರತಕ್ಕಂಥ ಈ ಒಂದು ಮಸೂದೆ ಏನಿದೆ ನಾನು ಈ ಸದನದ ಗೌರವಾನ್ವಿತ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಇದರಲ್ಲಿ ರಾಜಕೀಯವನ್ನು ಬೆರೆಸುವುದಕ್ಕೆ ನಾನು ಬಯಸುವುದಿಲ್ಲ. ಈ ಸದನದ ಎಲ್ಲರೂ ಕೂಡ ಜನಗಳ ವಿಶ್ವಾಸವನ್ನು ಪಡೆದುಕೊಂಡೇ ಇಲ್ಲಿಗೆ ಬಂದಿದ್ದೇವೆ. ಆಡಳಿತ ಪಕ್ಷದವರು ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ಆದ್ದರಿಂದ ಅವರು ಆಡಳಿತವನ್ನು ನಡೆಸುತ್ತಿದ್ದಾರೆ. ನಿಮಗೂ ಸಹಿತ ನಮಗಿಂತ ಹೆಚ್ಚಿನ ಜವಾಬ್ದಾರಿ ಇದೆ, ಜನಗಳ ಬಗ್ಗೆ ಕಳಕಳಿ ಇದೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ. ಆಡಳಿತ ಸದಸ್ಯರೆಲ್ಲರಿಗೂ ನಮಗಿಂತಲೂ ಹೆಚ್ಚಿನ ಜವಾಬ್ದಾರಿ ಮತ್ತು ಕಳಕಳಿ ಇದ್ದು, ನಮ್ಮಂತ ಜಗಳ ಆಡಿಕೊಳ್ಳದೇ ಮತ್ತೊಮ್ಮೆ ಅಧಿಕಾರಕ್ಕೆ ಬರಬೇಕೆಂಬ ಇಚ್ಛೆ ಇದೆ ಎಂಬುದನ್ನೂ ಸಹಾ ನಾವು ಅರ್ಥಮಾಡಿಕೊಂಡಿರುತ್ತೇವೆ. ಆದರಲ್ಲೂ ವಿಕೇಂದ್ರೀಕರಣದ ಬಗ್ಗೆ ಬಹಳ ನಂಬಿಕೆ ಇಡತಕ್ಕಂಥ ಜನ ನೀವು. ನಿಮಗೆ ಇರುವಷ್ಟು ವಿಕೇಂದ್ರಿಕರಣದ ಬಗೆಗಿನ ನಂಬಿಕೆ ನಮಗೆ ಇಲ್ಲವೆಂದು ಇವತ್ತು ಸಾಬೀತು ಮಾಡಬೇಕಾಗಿರತಕ್ಕಂಥವರು ನಾವು. ಏಕೆಂದರೆ ಆಡಳಿತ ಪಕ್ಷದಲ್ಲಿ ನೀವು ಇದ್ದೀರಿ. ನಾವು ಸಣ್ಣ ಸಂಖ್ಯೆಯಲ್ಲಿ ಇದ್ದೇವೆ. ನಾವು ಜನಗಳಿಂದ ತಿರಸ್ಕೃತವಾಗಿ ಕೇವಲ 18 ಜನ ಮಾತ್ರ ನಮ್ಮ ಪಕ್ಷದಲ್ಲಿದ್ದೇವೆ. ನಮ್ಮ ಮಿತ್ರ ಪಕ್ಷವಾದ ಬಿ.ಜೆ.ಪಿ.ಯಲ್ಲಿ 44ಜನ ಸದಸ್ಯರು ಇದ್ದಾರೆ. ಈ ಮಸೂದೆ ಮೂಲಕ ಏನನ್ನು ನೀವು ಮಾಡಲಿಕ್ಕೆ ಹೊರಟಿದ್ದೀರಿ. ಯಾವ ಉದ್ದೇಶದಿಂದ ಇದನ್ನು ನೀವು ಇದನ್ನು ತರಲಿಕ್ಕೆ ಹೊರಟಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ನಿಗದಿಪಡಿಸಿದ ಮೀಸಲಾತಿ ಬಗ್ಗೆ ನಾನು ಇಲ್ಲಿ ಮಾತನಾಡಲಿಕ್ಕೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಆಡಳಿತ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಿಲ್ಲ.

ಅಧ್ಯಕ್ಷರು: ಮೊದಲು ತಾವು ಪ್ರಸ್ತಾವ ಮಾಡಿರತಕ್ಕ ಪ್ರಶ್ನೆಗೆ ಉತ್ತರ ಕೊಡತಕ್ಕದ್ದು ನನ್ನ ಕರ್ತವ್ಯ. ಅನಂತರ ನೀವು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ನಾನು ಪ್ರೊಸೀಜರ್ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ದಾರಿ ತಪ್ಪುತ್ತಿಲ್ಲ. ತಾವು ದಯವಿಟ್ಟು ಪೂರ್ತಿಯಾಗಿ ನಾನು ಹೇಳುವುದನ್ನು ಪರಾಂಬರಿಸಬೇಕು, ಆಲಿಸಬೇಕು. ತಮ್ಮ ಮನಸ್ಸನ್ನು ಒಲೈಸಿಕೊಳ್ಳತಕ್ಕ ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ. ಇಲ್ಲದಿದ್ದರೆ ನಾವು ವಿರೋಧ ಪಕ್ಷದಲ್ಲಿ ಕೆಲಸ ಮಾಡಲಿಕ್ಕೆ ಆಗುವುದಿಲ್ಲ. ತಾವು ದಯಮಾಡಿ ನಾನು ಹೇಳುವುದನ್ನು ಕೇಳಬೇಕೆಂದು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಎಲ್ಲ ಸದಸ್ಯರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ರೀತಿ ಆಡಳಿತ ಪಕ್ಷದವರು ಅಡ್ಡಿಪಡಿಸಿದರೆ ನಾನು ಮಾತನಾಡುವುದು ಹೇಗೆ? ಯಾವುದೇ ಪ್ರೊಸೀಜರ್‌ಗೆ ನಾವು ಅಡ್ಡಿಪಡಿಸಿಲ್ಲ.....

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಪೊಸೀಜರ್ ಬಗ್ಗೆ ಹೇಳುತ್ತಿದ್ದಾರೆ. ಅದನ್ನು ಪ್ರಸ್ತಾಪ ಮಾಡಲಿಕ್ಕೂ ಸಹಾ ಅವರಿಗೆ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ? ಈ ರೀತಿ ಆಡಳಿತ ಪಕ್ಷದವರು ಕಿರುಚಾಡುತ್ತಿರುವುದರಿಂದ ಈ ಮಸೂದೆ ತಂದಿರುವ ಹಿಂದೆ ಏನು ದುರುದ್ದೇಶ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಇವರ ಕಿರುಚಾಟ ಇವರ ಉದ್ದೇಶವನ್ನು ತೋರಿಸುತ್ತದೆ. ಸಬ್‌ಮಿಷನ್ ಮಾಡಲೂ ಸಹಾ ಬಿಡುವುದಿಲ್ಲ ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ನಾನು ಮಾನ್ಯ ಸಿಂಧ್ಯಾರವರು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ದಯವಿಟ್ಟು ಎಲ್ಲಾ ಸದಸ್ಯರೂ ಕುಳಿತುಕೊಳ್ಳಿ. ಮಾನ್ಯ ಮಂತ್ರಿಗಳು ಮಾನ್ಯ ಸಿಂಧ್ಯಾರವರಿಗೆ ಮಾತನಾಡಲು

ಅವಕಾಶ ಮಾಡಿಕೊಟ್ಟು ಸುಮ್ಮನೆ ಕುಳಿತಿರುವಾಗ ಮಾನ್ಯ ಆಡಳಿತ ಪಕ್ಷದ ಸದಸ್ಯರುಗಳು ಏಕೆ ಮಾತನಾಡುತ್ತಿದ್ದೀರಿ. ಎರಡು ನಿಮಿಷ ಮಾನ್ಯ ಸಿಂಧ್ಯಾರವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ಅನಂತರ ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ. ಅನಂತರ ನಾನೂ ಕೂಡ ಸ್ವಲ್ಪ ಮಾತನಾಡುತ್ತೇನೆ. ಅದಾದ ನಂತರ ತಾವುಗಳು ಮಾತನಾಡಲಿಕ್ಕೆ ನಾನು ಅವಕಾಶ ಕೊಡುತ್ತೇನೆ. ಮಾನ್ಯ ಸಿಂಧ್ಯಾರವರು ಒಂದೆರಡು ನಿಮಿಷಗಳ ಕಾಲ ಮಾತನಾಡಲು ಬಿಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಗೌರವಾನ್ವಿತ ಸದಸ್ಯರೊಬ್ಬರು ಮಾತನಾಡತಕ್ಕ ಸಂದರ್ಭದಲ್ಲಿ ಈ ರೀತಿಯ ಕಿರುಚಾಟ ಮತ್ತು ಅರಚಾಟದಿಂದ ಧ್ವನಿಯನ್ನು ಅಡಗಿಸಲಿಕ್ಕೆ ಆಗುವುದಿಲ್ಲ ಎಂಬುದು ಆ ಕಡೆ ಕುಳಿತಿರತಕ್ಕಂಥ ಮಾನ್ಯ ಹಿರಿಯ ಸದಸ್ಯರೆಲ್ಲರಿಗೂ ಸಹಿತ ಗೊತ್ತಿದೆ. ಕಿರುಚಾಟ ಮತ್ತು ಅರಚಾಟದಿಂದ ನಾನು ಮಾತನಾಡುವುದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ನಾನು ಮಾನ್ಯ ಅಧ್ಯಕ್ಷರನ್ನು ಕನ್‌ವಿನ್ಸ್ ಮಾಡಲು ಪ್ರಯತ್ನ ಮಾಡುತ್ತಿದ್ದೇನೆ. ಈ ರೀತಿಯ ಕಿರುಚಾಟಗಳಿಗೆ ನಾವು ಹೆದರುವುದಿಲ್ಲ. ಇವರಿಗೆ ಏನು ಕಿರುಚಾಡಲು ಬರುವುದು? ನಾವೂ ಕೂಡ ಕಿರುಚಾಡಬಲ್ಲೆವು.....

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಆಸೀನರಾಗಿ.

(ಗೊಂದಲ)

7.00 ಪಿ.ಎಂ

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಸಿಂಧ್ಯಾರವರು ಈಗ ಪ್ರೊಸೀಜರ್ ಬಗ್ಗೆ ಮಾತನಾಡುತ್ತಾರೆ, ಅವರು ಮಾತನಾಡಿದ ನಂತರ ನೀವು ಬೇಕಾದರೆ ಮಾತನಾಡಿ.

(ಗೊಂದಲ)

ಶ್ರೀ ಡಿ.ವಿ.ಸದಾನಂದ ಗೌಡ: ತಮ್ಮ ನಾಯಕರ ನಂತರ ಮಾತನಾಡಿ ಎಂದು ಹೇಳುತ್ತಿದ್ದರು ನೀವು ಏಕೆ ಈಗ ಕಿರುಚುತ್ತಿದ್ದೀರಿ?

SRI P.G.R.SINDHIA: I must be heard by the press.

ಆಡಳಿತ ಪಕ್ಷದ ಗೌವಾನ್ವಿತ ಸದಸ್ಯರು ಏನು ಇದ್ದಾರೆ ಇವರುಗಳ ಸಂಖ್ಯೆ ಸರ್ಕಾರ ರಚನೆ ಮಾಡುವುದಕ್ಕಿಂತ ಜಾಸ್ತಿ ಇದೆ ಎನ್ನತಕ್ಕಂಥ ಅರಿವು ನಮಗಿದೆ. ಈ ರೀತಿ ನಮ್ಮನ್ನು cowed down ಮಾಡುವುದಕ್ಕೆ ಆಗುತ್ತದೆಯೇ? ಅಧ್ಯಕ್ಷರೆ ತಾವೇ ಹೇಳಿ ಇದು ಪ್ರಜಾಪ್ರಭುತ್ವನಾ? ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನಿನ್ನೆ ಎಲ್ಲಾ criminalisation of politics ಬಗ್ಗೆ ಮಾತನಾಡಿ, ಎಲ್ಲರೂ ಚಿನ್ನಾಗಿರಬೇಕು ಎನ್ನುವಂತಹ ಮಾತುಗಳನ್ನು ಹೇಳಿ. ಈಗ ಈ ರೀತಿ ಆದರೆ ಹೇಗೆ? I am coming to the point. I am not afraid or scared of shouting. I cannot be cowed down. I must have my say, according to the procedure. But I am not going to allow this.... Why should I not speak. It is my privilege, my electorate have given me this right.

(Interruptions)

ಚುನಾಯಿತರಾಗಿ ನಿಮಗೆ ಯಾವ ರೀತಿ ಅಧಿಕಾರವನ್ನು ಜನಗಳು ಕೊಟ್ಟಿದ್ದಾರೆ, ಅದೇ ರೀತಿ ಅಧಿಕಾರ ನಮಗೂ ಕೊಟ್ಟಿದ್ದಾರೆ. ನೀವು ಏನು ಕಿರುಚಿಕೊಳ್ಳುವುದು? ನಾವು ಕಿರುಚಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಎ.ರಾಮದಾಸ್: ಆಡಳಿತ ಪಕ್ಷದ ಸದಸ್ಯರು ನಾವು ಮಾಡುವಂತಹ ಕೆಲಸವನ್ನು ಅವರೇ ಮಾಡುತ್ತಿದ್ದಾರೆ. ನಮಗೆ ಮಾತನಾಡುವುದಕ್ಕೆ ಅಡ್ಡಿಪಡಿಸುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು: ನೀವು ಈ ರೀತಿ ಮಾಡಿಲ್ಲದಿದ್ದರೆ ಅವರು ಇಷ್ಟು ಹೊತ್ತಿಗೆ ತಮ್ಮ ಮಾತನ್ನು ಮುಗಿಸುತ್ತಿದ್ದರು. ಮಾನ್ಯ ಗುರುಸ್ವಾಮಿಯವರೇ ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಮಾನ್ಯ ಸಿಂಧ್ಯಾರವರಿಗೆ ಅವಕಾಶ ಮಾಡಿಕೊಡಿ ಅವರು ತಮ್ಮ ಮಾತನ್ನು ಮುಗಿಸುತ್ತಾರೆ. ನೀವು ಎರಡು ನಿಮಿಷಗಳ ಕಾಲ ಅವರಿಗೆ ಅವಕಾಶ ಕೊಟ್ಟರೆ ಅವರು ತಮ್ಮ ಮಾತನ್ನು ಮುಗಿಸುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ(ಕಾಗೇರಿ): ಮಂತ್ರಿ ಮಂಡಲ ಯಾವಾಗ ವಿಸ್ತರಣೆ ಮಾಡುತ್ತಾರೆ ಎಂದು ಹೇಳಿದರೆ ಆಗ ಅವರು ಸುಮ್ಮನಾಗುತ್ತಾರೆ.

ಅಧ್ಯಕ್ಷರು: ಆ ವಿಷಯ ಎಲ್ಲಾ ಇಲ್ಲಿ ಬೇಕಾಗಿಲ್ಲ, ತಾವು ಸುಮ್ಮನಿರಿ, ಮಾನ್ಯ

ಸಿಂಧ್ಯಾರವರೇ, ತಾವು ಮಾತನಾಡಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಪ್ರಜಾ ತಂತ್ರದ ವ್ಯವಸ್ಥೆಯಲ್ಲಿ ಸರ್ಕಾರ, ಮಂತ್ರಿಮಂಡಲ, ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ಸದಸ್ಯರು ಇದರ ಬಗ್ಗೆ ನಮಗೆ ಗೊತ್ತಿದೆ ಹಾಗೂ ಈಗ ನಾವು ಎಲ್ಲಿ ಇದ್ದೇವೆ ಜನ ನಮ್ಮನ್ನು ತಿರಸ್ಕಾರ ಮಾಡಿ ಇಲ್ಲಿ ಕೂಡಿಸಿರತಕ್ಕಂಥದ್ದು, ಇವು ಎಲ್ಲಾ ವಿಚಾರಗಳು ನಮಗೆ ಗೊತ್ತಿವೆ. ಆಡಳಿತ ಪಕ್ಷದವರು ಕೊನೆಯದಾಗಿ ಏನು ಹೇಳುತ್ತೀರಿ ಎಂದರೆ ಸಿ.ಎಲ್.ಪಿ.ಯಲ್ಲಿ ಏನು ಡಿಸೈಡ್ ಆಗುತ್ತದೆಯೋ ಅದು ಇಲ್ಲಿ ಇಂಪ್ಲಿಮೆಂಟ್ ಆಗುತ್ತದೆ ಎಂಬ ಅರಿವು ನಮಗೆ ಇದೆ. ಆದರೆ ನಾವು ಇಲ್ಲಿ ಏನು ಹೇಳುತ್ತೇವೆಂದರೆ, ನಮ್ಮ ಮಾನ್ಯ ಮಿತ್ರರು ಸ್ವಲ್ಪ ತಾಳ್ಮೆಯಿಂದ ಕೇಳಿದರೆ ಅವರ ಮನಸ್ಸು ಬದಲಾವಣೆ ಆಗುತ್ತದೆ, ಅವರ ಮನಸ್ಸು ಕರಗುತ್ತದೆ ಎನ್ನುವುದರಲ್ಲಿ ಯಾವುದೇ ರೀತಿಯ ಸಂದೇಹ ನನಗಂತೂ ಇಲ್ಲ. There are hundreds of instances where the Bill has been withdrawn. ನನ್ನ ಉದ್ದೇಶ ಏನೆಂದರೆ, ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಕೊಟ್ಟಿದ್ದಂಥ ಸಂದರ್ಭದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾಡಿರತಕ್ಕಂಥ ಭಾಷಣಗಳು, ಅನೇಕ ಸಾರಿ ಈ ಅಧಿಕಾರ ನೂರಕ್ಕೆ ನೂರರಷ್ಟು ಮಿಸ್‌ಯೂಸ್ ಆಗುತ್ತದೆ, ಅಗತ್ಯಕ್ಕಿಂತ ಜಾಸ್ತಿ ಸಬ್ಜೆಕ್ಟ್ ಇರುತ್ತದೆ, ಚುನಾವಣಾ ಆಯೋಗದಲ್ಲಿ ಇದರ ಅಧಿಕಾರ ಇದ್ದರೆ.....

MR.SPEAKER: You are going into the merits.....

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊದಲು ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಮಾತನಾಡುತ್ತಿದ್ದರಿ, ಈಗ ತಾವು ಮೆರಿಟ್ಸ್ ಮೇಲೆ ಮಾತನಾಡುತ್ತಿದ್ದೀರಿ. ನೀವು ಮೆರಿಟ್ಸ್ ಆಫ್ ದಿ ಬಿಲ್ ಮೇಲೆ ಕ್ಲಾಸ್ ವೈಸ್ ಹೋಗುತ್ತಿದ್ದೀರಿ, ಹೀಗಾದರೆ ಹೇಗೆ? ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ ಉದ್ದೇಶ ಏನು?

SRI P.G.R.SINDHIA: I have not raised any point of order. ನಾನು ರೂಲ್ಸ್ ಅಂಡ್ ಪ್ರೊಸೀಜರ್‌ನ್ನು ಪ್ರಶ್ನೆ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೌಲ್ ಅಂಡ್ ಶಕ್ಧರ್ ನಲ್ಲಿ ಏನು ಇದೆ?

ಅಧ್ಯಕ್ಷರು: ನೀವು ಈಗ ಪಾಯಿಂಟ್ ಬೈ ಪಾಯಿಂಟ್ ಕೇಳುತ್ತಿದ್ದೀರಿ, clause wise.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಈಗ ಅವರು ಕ್ಲಾಸ್ ಬೈ ಕ್ಲಾಸ್ ಹೋಗುತ್ತಿದ್ದಾರೆ ಅಂದರೆ ಏನರ್ಥ? ಅಂದರೆ ಅದರ

ಬಗ್ಗೆ ಏನು ಹೇಳಬೇಕೋ ಅದನ್ನು ಹೇಳಿ ನಂತರ ನೀವೇನು ಮಾಡುತ್ತೀರಿ ಮಾಡಿ ನೋಡೋಣ ಎಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ರೂಲ್ಸ್ 81ರ ಪ್ರಕಾರ

"...If the motion is opposed, the speaker may permit a brief explanatory statement from the member who opposes and a brief reply from the mover, and shall then, without further debate, put the question thereon" ಇದನ್ನೆಲ್ಲಾ ಅವರು ಹೇಳುತ್ತಿರುವುದು.

ಅಧ್ಯಕ್ಷರು: ಆದರೆ, ಅವರು ಪೂರ್ಣ ವಿವರವನ್ನು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಯಾವ ಪಾಯಿಂಟ್‌ನ್ನು ಅಪೋಜ್ ಮಾಡುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಬಿ.ಸೋಮಶೇಖರ್: ನಮ್ಮ ನಾಯಕರು ಹೇಳತಕ್ಕಂಥ ವಿಚಾರ ಏನೆಂದರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಈ ಕಡೆ ಕುಳಿತಿರತಕ್ಕಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾಗಿ, ವಿರೋಧ ಪಕ್ಷದ ನಾಯಕರಾಗಿ ಅವರು ಏನು ಮಾತನಾಡಿದ್ದಾರೆ ಆ ವಿಚಾರಗಳು ಆ ಪಕ್ಷದ ಸಿದ್ಧಾಂತ ಹಾಗೂ ನಿಲುವನ್ನು ಇಲ್ಲಿ ಪ್ರತಿಬಿಂಬಿಸಿದರು. ಆದರೆ ಅವರು ಈಗ ಸರ್ಕಾರದಲ್ಲಿ ಹೋಗಿ ಮಾತನಾಡುತ್ತಿದ್ದಾರೆ, ಅದೇ ಜನ ಈ ವಿಧೇಯಕವನ್ನು ಇಲ್ಲಿ ಮಂಡಿಸುತ್ತಿದ್ದಾರಲ್ಲ ಇದು ನೈತಿಕತೆಗೆ ವಿರುದ್ಧವಾದಂಥ ವಿಚಾರ, ಆದ್ದರಿಂದ ಈ ವಿಧೇಯಕವನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ.....

ಅಧ್ಯಕ್ಷರು: ಬಿಲ್ ಇನ್ನು ಮೂವ್ ಮಾಡಿಲ್ಲ, ಮಾಡಿದ ನಂತರವೇ ತಾನೇ ತಾವು ಮಾತನಾಡುವುದು.

ಶ್ರೀ ಬಿ.ಸೋಮಶೇಖರ್: ಅವರು ಈ ಬಿಲ್‌ನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ನೈತಿಕ ಹಕ್ಕು ಇಲ್ಲ.ಎನ್ನುವುದೇ ನಮ್ಮ ಪ್ರಶ್ನೆ. ಅದನ್ನೆ ನಾವು ಹೇಳುತ್ತಿರುವುದು.

ಅಧ್ಯಕ್ಷರು: ನೋ, ನೋ, ಅದು ಆ ರೀತಿ ಆಗಲ್ಲ. ಆ ಪ್ರಶ್ನೆ ಬರುವುದಿಲ್ಲ. ಬಿಲ್ ಮೂವ್ ಮಾಡಿದ ಮೇಲೆ ನೀವು ಯಾವ ಪಾಯಿಂಟ್ ಬೇಕೋ ಅದನ್ನು ಮಾತ್ರ ಹೇಳಬೇಕು. ನೈತಿಕ ಹಕ್ಕಿನ ಪ್ರಶ್ನೆ ಇಲ್ಲಿ ಬರುವುದಿಲ್ಲ. He has not at all moved the Bill.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಬಿಲ್ ಬಗ್ಗೆ ಡೀಟೈಲ್ ಆಗಿ ನಾನು ಹೋಗಲಿಲ್ಲ.

"...the speaker may permit a brief explanatory statement from the member who opposes..." The explanatory statement. ಹೇಗಿರಬೇಕು ಎಂಬುದನ್ನು ನಾನು ತಾನೇ ಹೇಳಬೇಕು, ಇದನ್ನು ಬೇರೆಯವರು ಹೇಳುವುದಕ್ಕಾಗುತ್ತದೆಯೇ? ಇದು ಸದುದ್ದೇಶದಿಂದ ಕೂಡಿರತಕ್ಕಂಥ ತಿದ್ದುಪಡಿ ಅಲ್ಲ ಎಂದು ನಾನು ಹೇಳುತ್ತಿದ್ದೇನೆ. ಇದಕ್ಕಾಗಿ ನಾನು ಇದನ್ನೆಲ್ಲಾ ಹೇಳಿದೆನೇ ಹೊರತು ಬೇರೆ ಉದ್ದೇಶ ನನಗಿಲ್ಲ. ತಮ್ಮ ಬಗ್ಗೆ ಹೇಳುತ್ತಿಲ್ಲ ಸ್ವಾಮಿ ತಾವು ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನಿಮ್ಮೆಲ್ಲರ ಬಗ್ಗೆ ನಮಗೆ ಬಹಳ ಗೌರವ ಇದೆ, ಆದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಹೆಚ್.ಕೆ.ಪಾಟೀಲ್ ರವರು ವಿರೋಧ ಪಕ್ಷದಲ್ಲಿ ಇದ್ದಂಥ ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂದರೆ, ಇದು ಎಕ್ಸ್‌ಪ್ಲೆನೇಟರಿ...

ಅಧ್ಯಕ್ಷರು: ನೋಡಿ ಇದು ಎಕ್ಸ್‌ಪ್ಲನೇಟರಿ ಅಲ್ಲ. without moving the bill, how can you oppose....?

ಶ್ರೀ ಪಿ.ಜಿ.ಆರ್.ಸಿಂಧ್ಯ: ರೂಲ್ಸ್‌ನಲ್ಲಿ ಇದೆ ನಾನೇನು ಮಾಡಿಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಸಚಿವರು): ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ ಏನೆಂದರೆ, ತಾವು ಯಾವ ರೂಲ್ಸನ್ನು ಕೋಟ್ ಮಾಡುತ್ತಿದ್ದೀರಿ ಅದನ್ನು ಪೂರ್ತಿಯಾಗಿ ಓದಿ. ಅರ್ಧಕ್ಕೆ ನಿಲ್ಲಿಸಬೇಡಿ, ಆ ರೂಲ್ಸ್‌ನಲ್ಲಿ ಏನು ಇದೆ ಅಂದರೆ,

"The speaker may permit a brief esplanatory statement from the member who opposes and a brief reply from the mover, and shall then, without further debate, put the question thereon. ಯಾವಾಗ ಚರ್ಚೆಗೆ ಅವರಿಗೆ ಅವಕಾಶ ಇದೆ ಎಂದರೆ,

provided that where a motion is opposed on the ground that the bill initiates legislation outside the legislative competence of the House, the speaker may permit a full discussion thereon". ಎಂದಿದೆ. ಆಗ ಅವರು ಹೇಳಬಹುದು, ಆದರೆ ನೋ ಡಿಬೇಟ್ ಎಂದು ಹೇಳುತ್ತಾರೆ. The second

objection raised is, this is listed in the list of business. The speaker has listed in the business of the day. Thirdly, the speaker in his capacity as the presiding officer inherent powers to....

This is listed in the business of the day. We are not going outside the purview of this. I would appreciate if the Hon.Member enlighten us about the question of initiating legislation outside the legislative competence to introduce the Bill. Later on, he has got every right to oppose at the stage of consideration. ಮಾಡುವುದಕ್ಕೆ ತಮಗೆ ಅಧಿಕಾರ ಇದೆ, ಈ ಅಧಿಕಾರವನ್ನು ಬಳಸಿ ಅವರಿಗೆ ಸಮಾಧಾನ ಪಡಿಸಿ ಇದನ್ನು ತರಬೇಕು ಎಂದು ಹೇಳಿದ್ದೀರಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಸಚಿವರು ಒಂದು ಪ್ಯಾರಾ ಓದಿ ಇನ್ನೊಂದು ಪ್ಯಾರಾ ಓದಲಿಲ್ಲ. ಏಕೆಂದರೆ ಅವರಿಗೆ ಇನ್‌ಕನ್‌ವೀನೆಂಟ್ ಆಗಿರುವ ಪ್ಯಾರಾವನ್ನು ಬಿಟ್ಟು ಬಿಟ್ಟರು.

"provided that where a motion is opposed on the ground that the Bill initiates legislation outside the legislative competence of the House, the speaker permit a full discussion thereon. ಅಂದರೆ "Before introduction ನಾವು ಅಧ್ಯಕ್ಷರನ್ನು ಕನ್‌ವಿನ್ಸ್ ಮಾಡುವುದರಲ್ಲಿ ಸಾಧ್ಯವಾದರೆ, ತಾವು ಸಂಪೂರ್ಣ ಚರ್ಚೆಗೆ ಅವಕಾಶ ನೀಡಬಹುದು. ಆದರೆ ನಾವು ಫೆಲ್ಯೂರ್ ಆದರೆ ಏನೂ ಮಾಡುವುದಕ್ಕಾಗಲ್ಲ. "If leave to introduce the Bill is granted, the mover shall forthwith introduce the Bill."

ಆಮೇಲೆ ಬಿಲ್ ಇಂಟ್ರಡ್ಯೂಸ್ ಮಾಡಬಹುದು. ನಾವು ಏನು ಹೇಳುತ್ತಿದ್ದೇವೆಂದರೆ, ಇವತ್ತು ಇವರು ತಂದಿರತಕ್ಕಂಥ ತಿದ್ದುಪಡಿ ಏನು ಇದೆ, ಇದನ್ನು ಇವರು ತಮಗೆ ಏಳು ದಿವಸಗಳ ಹಿಂದೆ ಬರೆಯಬೇಕಾಗಿದ್ದು ಇವರು ಬರೆದಿಲ್ಲ. ಎರಡು ದಿವಸಗಳ ಹಿಂದೆ ಈ ಬಿಲ್ ಅನ್ನು ಹೌಸ್‌ನಲ್ಲಿ ಇಂಟ್ರಡ್ಯೂಸ್ ಮಾಡಲಿಲ್ಲ. ಇಷ್ಟೊಂದು ಅವಸರದಲ್ಲಿ ಏಕೆ ಮಾಡಿದರು? ಇದರ ಬಗ್ಗೆ ನಾವೇನಾದರೂ ಹೇಳಿದರೆ ಪ್ರೊವೋಕೇಟ್ ಆಗುತ್ತದೆ, ನಾನು ಗೌರವಾನ್ವಿತ ಸದಸ್ಯರಿಗೆ ಕನ್‌ವಿನ್ಸ್ ಮಾಡುತ್ತೇನೆ, ಈಗಿರತಕ್ಕಂಥ ಕಾನೂನು ಚೆನ್ನಾಗಿದೆ, ನಿಮಗೆ ಶತ್ರುಗಳು ಕಡಿಮೆ ಇದ್ದಾರೆ, ನೀವು

ಎಲ್ಲರನ್ನೂ ಕನ್‌ವಿನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಒಂದೊಂದು ತಾಲ್ಲೂಕಿನಲ್ಲಿ ಆಡಳಿತದ ಪಕ್ಷದ ಸದಸ್ಯರೇ ಇಬ್ಬರು ಮೂರು ಜನ ಇರುತ್ತೀರಿ, ಒಬ್ಬರಿಗೊಬ್ಬರು ದ್ವೇಷದಿಂದ ಜಾತಿಕಲಹಗಳು ಉಂಟಾಗುತ್ತವೆ. ನಾನು ಮಾತನಾಡುವುದಕ್ಕೆ ಇವತ್ತು ಎಲ್ಲರೂ ಅಡ್ಡಿಪಡಿಸುತ್ತಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ರೂಲ್ 8ರಲ್ಲಿ ಏನು ಹೇಳಲಾಗಿದೆ ಎಂದರೆ, ''ವಿಧೇಯಕವನ್ನು ಮಂಡಿಸುವ ಪ್ರಸ್ತಾವಕ್ಕೆ ಅನುಮತಿ ದೊರೆತ ನಂತರ ಪ್ರಸ್ತಾವದ ಸಂಬಂಧದಲ್ಲಿ ವಿಧೇಯಕವನ್ನು ಮಂಡಿಸುವವರು ಸಂಕ್ಷಿಪ್ತ ವಿವರಣಾತ್ಮಕ ವಿವರಣೆಯನ್ನು ನೀಡಬಹುದು.''

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಕಾನೂನು ಸಚಿವರು ಹೇಳಿದಂಥ ವಿಚಾರವನ್ನೇ ಇವರು ಸಹ ಹೇಳುತ್ತಿದ್ದಾರೆ. ಆದರೆ ವ್ಯತ್ಯಾಸ ಏನೆಂದರೆ, ಅವರು ಇಂಗ್ಲೀಷ್‌ನಲ್ಲಿ ಹೇಳಿದರು, ಇವರು ಕನ್ನಡದಲ್ಲಿ ಹೇಳುತ್ತಿದ್ದಾರಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ: ವಿಧೇಯಕ ಮಂಡನೆ ಆದಮೇಲೆ ಅವರು ವಿರೋಧ ಮಾಡಬಹುದಷ್ಟೆ. ಆದ್ದರಿಂದ, ಮುಂಚಿತವಾಗಿ ವಿರೋಧ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಸಿ.ಭೈರೇಗೌಡ: ಮಾನ್ಯ ಅಧ್ಯಕ್ಷರೆ, ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಕೆಲವು ವಿಧಿ ವಿಧಾನಗಳಿವೆ. ಆದ್ದರಿಂದ, ತಾವು ವಿಧೇಯಕನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ the mover has to seek leave of the house to move the motion. At that stage, we can object. ವಿಧೇಯಕದ ಮಂಡನೆಗೆ ತಾವು ಅಪ್ಪಣೆ ಪಡೆಯತಕ್ಕಂಥ ಸಂದರ್ಭದಲ್ಲಿಯೂ ನಾವು ಆಬ್ಜೆಕ್ಟ್ ಮಾಡಬಹುದು. ಇವತ್ತಿನ ದಿವಸ ಮಾನ್ಯ ಸಿಂಧ್ಯರವರು ಅದೇ ಕೆಲಸವನ್ನು ಮಾಡುತ್ತಿದ್ದಾರಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ: ಇನ್ನು ಮೋಷನ್‌ನನ್ನೆ ಮೂವ್ ಮಾಡಿಲ್ಲ, ನೀವು ಹೇಗೆ ವಿರೋದ ಮಾಡುತ್ತೀರಿ?

ಶ್ರೀ ಸಿ.ಭೈರೇಗೌಡ: ಅನುಮತಿ ಕೊಟ್ಟ ನಂತರವೇ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಬೇಕೆಂಬುದು ನಮಗೂ ಗೊತ್ತಿದೆ. But first you have to seek to leave of the House to introduce the Bill. At that stage we want to have our say.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮೊದಲು ಅವರು ಬಿಲ್‌ನ್ನು ಮೂವ್ ಮಾಡುವುದಕ್ಕೆ ಅನುಮತಿ ಕೊಡಿ, ನಂತರ ನೀವು ವಿರೋಧ ಮಾಡಬಹುದು.

ಶ್ರೀ ಜಗದೀಶ್ ಶೆಟ್ಟರ್: ಇದನ್ನು ನಾಳೆ ತೆಗೆದುಕೊಳ್ಳೋಣ.

ಅಧ್ಯಕ್ಷರು: ನಾಳೆ ಬೇಡ ಇವತ್ತೇ ಮುಗಿಸೋಣ. ನಾನು ಈಗ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ನಾಯಕರು ಚರ್ಚೆ ಮಾಡಿರುವುದನ್ನು ಕೇಳಿದ್ದು, ಇದಕ್ಕೆ ಸಂಬಂಧಪಟ್ಟಂತೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ರೂಲಿಂಗ್ ಕೊಡುವುದಕ್ಕಿಂತ ಮುಂಚಿತವಾಗಿ ನಮ್ಮನ್ನು ತಾವು ಕೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ನಾವುಗಳು ಈಗ ಮಾಡತಕ್ಕಂಥ ಚರ್ಚೆ ಶೂನ್ಯ ಸಮಯದಲ್ಲಿದ್ದಂತಿದೆ. ನಮ್ಮ ಅಜೆಂಡಾ ಏನಿದೆ ಅದರ ಪ್ರಕಾರ ಚರ್ಚೆಯನ್ನು ಶೂನ್ಯದಲ್ಲಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ಮೊದಲು ಇಂಟ್ರಡ್ಯೂಸ್ ಮಾಡಿದ ಮೇಲೆ they get the opportunity. Till such time, it is just a vacum. In vacum only the question of legislative competence of this House can be raised, You have permitted us and therefore it is in the agenda today.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಾವು ಈ ಸಭೆಯ ಸಾರ್ವಭೌಮರು. ನಮ್ಮೆಲರ ರಕ್ಷಣೆಯನ್ನು ಅದರಲ್ಲಿಯೂ ವಿಶೇಷವಾಗಿ ವಿರೋಧ ಪಕ್ಷ ರಕ್ಷಣೆಯನ್ನು ತಾವು ಮಾಡಬೇಕಾಗಿರುವಂತವರು, ಆದ್ದರಿಂದ ತಾವೇ ಏಕಾಏಕಿ ತೀರ್ಮಾನ ಕೊಟ್ಟರೆ ಪಾಮರರಾದ ನಾವು ಎಲ್ಲಿಗ ಹೋಗಬೇಕೆಂಬುದನ್ನು ತಾವು ದಯವಿಟ್ಟು ಹೇಳಬೇಕು?

ಅಧ್ಯಕ್ಷರು: ರೂಲಿಂಗ್‌ನ್ನು ಯಾವಾಗಾದರೂ ಕೊಡಲೇಬೇಕಲ್ಲವೆ. ರೂಲಿಂಗ್ ಕೊಡದೇ ಸುಮ್ಮನೆ ಇರುವುದಕ್ಕೆ ಎಂದಿಗೂ ಸಾಧ್ಯವಿಲ್ಲ. I cannot keep quiet.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇದರ ಹಿಂದೆ ದುರುದ್ದೇಶ ಇದೆ ಅದರಲ್ಲಿ ಯಾವುದೇ ರೀತಿಯ ಸಂಶಯವಿಲ್ಲವೆಂದು ಹಾಗೂ ಚುನಾವಣೆ ಆಯೋಗಕ್ಕೆ ಕೊಟ್ಟು ಆಡಳಿತ ಪಕ್ಷದ ಸದಸ್ಯರಿಗೆ ಅನುಕೂಲ ಮಾಡಿಕೊಳ್ಳುತ್ತಾರೆಂದು ದುರುದ್ದೇಶದ ಭಾಗಗಳನ್ನು ನಾನು ಇನ್ನು ಹೇಳುವುದಕ್ಕೆ ಹೋಗಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಸರ್ಕಾರ ಏನೆಂಬುದು ಎಲ್ಲರಿಗೂ ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಖರ್ಗೆಯವರು ವಿರೋಧ ಪಕ್ಷದಲ್ಲಿದ್ದಂಥ ಸಂದರ್ಭದಲ್ಲಿ ಏನೇನು ಪ್ರಸ್ತಾಪ ಮಾಡಿದ್ದಾರೆ ಎಂಬುದನ್ನು ಇದುವರೆಗೂ ಹೇಳುವುದಕ್ಕೆ ನಾವು ಹೋಗಿಲ್ಲ. ಆದರೂ ಇವರು ತಮ್ಮ ಮೇಲೆ ಒತ್ತಡ ತರುತ್ತಿದ್ದಾರೆ. ಈ ಸರ್ಕಾರ ದುರುದ್ದೇಶದಿಂದ ಇದನ್ನು ತಂದಿದೆ ಎಂದು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಇದೇ ಸದನದಲ್ಲಿ ಹಿಂದೆ ಸರ್ಕಾರ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿದಂಥ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಸಹಕಾರ ಕೊಟ್ಟಿದ್ದೇವೆ ಮತ್ತು ನಾವು ಸಹ ಆಡಳಿತವನ್ನು ನಡೆಸಿದ್ದು, ಇದರ ಬಗ್ಗೆ ನಮಗೂ ಸಹ ಗೊತ್ತಿರುವ ದೃಷ್ಟಿಯಿಂದ ಮತ್ತು ವಿಕೇಂದ್ರೀಕರಣದಲ್ಲಿ ಸಂಪೂರ್ಣವಾಗಿ ನಂಬಿಕೆ ಇಟ್ಟುಕೊಂಡಿರತಕ್ಕಂಥ ನಾವು...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಮೋಷನ್‌ನನ್ನು ಮೂವ್ ಮಾಡಬೇಕೇ ಇಲ್ಲವೇ ಎಂಬುದರ ಬಗ್ಗೆ ಮಾತನಾಡುವುದನ್ನು ಬಿಟ್ಟು ಬೇರೆ ಏನೋ ಹೇಳುವುದಕ್ಕೆ ಹೊರಟ್ಟಿದ್ದಾರೆ. ಆದ್ದರಿಂದ, ರೂಲ್ 81 ಏನು ಹೇಳುತ್ತದೆಂದು ತಾವು ಓದಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ತಾವು ಇದಕ್ಕೆ ಅಪ್ಪಣೆ ಕೊಡಬೇಡಿ. ಸರ್ಕಾರದ ಆಡಳಿತ ವ್ಯವಸ್ಥೆಯ ದುರುದ್ದೇಶ ಈ ವಿಧೇಯಕದಲ್ಲಿದೆ. ಇವರು ಒಳ್ಳೆಯ ಉದ್ದೇಶದಿಂದ ಇದನ್ನು ತಂದಿಲ್ಲ, ಆಡಳಿತ ಪಕ್ಷದ ಸದಸ್ಯರಿಗೆ ಅನುಕೂಲವಾಗುವ ದೃಷ್ಟಿಯಿಂದ ಇದನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಇದನ್ನು ವಿರೋಧಿಸಿ ನಾವು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಜೆ.ಡಿ.(ಯು) ಮತ್ತು ಜೆ.ಡಿ.(ಎಸ್) ಸದಸ್ಯರು ಧರಣಿ ಮಾಡಲು ಸದನದ ಬಾವಿಯೊಳಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಈ ಬಿಲ್ ಮೂವ್ ಮಾಡುವುದಕ್ಕೆ ಅವಕಾಶ ಇಲ್ಲ. ಇದು ಪ್ರಜಾತಂತ್ರ ವ್ಯವಸ್ಥೆಗೆ ವಿರೋಧವಾದಂಥದ್ದು ಮತ್ತು ರಾಜಕೀಯವನ್ನು ಇಂಟರ್‌ವಿನ್ ಮಾಡುವುದಕ್ಕೆ ಅವಕಾಶ ಮಾಡಿಕೊಡುವಂತಹ ಒಂದು ಬಿಲ್ ಆಗಿದೆ. ಅದಕ್ಕಾಗಿ ಇದನ್ನು ನಾವು ವಿರೋಧ ಮಾಡುತ್ತೇವೆ ಮತ್ತು ಇದು ಮಂಡನೆ ಕೂಡ ಆಗಬಾರದು. ಆದ್ದರಿಂದ ಇದನ್ನು ವಿರೋಧ ಮಾಡಿ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಾರ್ಟಿಯ ಸದಸ್ಯರು ಧರಣಿ ಮಾಡಲು ಸದನದ ಬಾವಿಯೊಳಗೆ ಬಂದರು)

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿಶ್ವೇಶ್ವರ ಹೆಗಡೆಯವರು ತಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿದರು)

ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ): ಮಾನ್ಯ ಅಧ್ಯಕ್ಷರೆ, ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ದಿವಂಗತ ಶ್ರೀ ರಾಜೀವ್ ಗಾಂಧಿಯವರು ಸಂವಿಧಾನದ 73 ಮತ್ತು 74ನೇ ರೂಲ್‌ಗೆ ತಿದ್ದುಪಡಿಯನ್ನು ಒಳ್ಳೆಯ ಉದ್ದೇಶದಿಂದ ತಂದಿದ್ದರು. ಈಗ ಇವರು ಇದಕ್ಕೆ ತಿದ್ದುಪಡಿ ತಂದು ರಾಜೀವ್ ಗಾಂಧಿಯವರ ಹೆಸರಿಗೆ ಅಗೌರವ ತಂದಿದ್ದಾರೆ. ರಾಜೀವ್ ಗಾಂಧಿಯವರ ಆಶಯಕ್ಕೆ ಇದು ವಿರುದ್ಧವಾಗಿದೆ. ಆದ್ದರಿಂದ ಈ ರೀತಿಯಾದ ತಿದ್ದುಪಡಿಯನ್ನು ಇವರು ತರಲೇಬಾರದು ಮತ್ತು ಈ ತಿದ್ದುಪಡಿಯನ್ನು ಮೂವ್ ಮಾಡುವುದಕ್ಕೂ ಸಹ ಯೋಗ್ಯವಾಗಿಲ್ಲ. ಪ್ರಜಾಪ್ರಭುತ್ವದ ನಿಯಮಕ್ಕೆ ಇದು ವಿರುದ್ಧವಾಗಿದೆ. ರಾಜ್ಯದ ಯೋಜನೆ ವಿಭಾಗ ಮತ್ತು ರಾಜ್ಯದ ಚುನಾವಣೆ ವಿಭಾಗವನ್ನು 73 ಮತ್ತು 74ನೇ ರೂಲ್‌ಗೆ ಅಮೆಂಡ್‌ಮೆಂಟ್‌ನ ಪ್ರಕಾರ ರಾಜ್ಯದ ಚುನಾವಣೆ ಆಯೋಗಕ್ಕೆ ಕೊಟ್ಟಿದೆ.

ಅಧ್ಯಕ್ಷರು: ಮೊದಲು ನನ್ನ ರೂಲಿಂಗ್‌ನಲ್ಲಿ ಏನು ಹೇಳುತ್ತೇನೆಂಬುದನ್ನು ಕೇಳಿ ಎಂದು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವೆಲ್ಲಾ ದಯವಿಟ್ಟು ನನ್ನ ರೂಲಿಂಗ್‌ನ್ನು ಕೇಳಬೇಕು. ಇದರ ಬಗ್ಗೆ ಶ್ರೀಮಾನ್ ಸಿಂಧ್ಯರವರ ಮತ್ತು ವಿರೋಧ ಪಕ್ಷದ ನಾಯಕರ ಮತ್ತು ಆಡಳಿತ ಪಕ್ಷದ ಸದಸ್ಯರೆಲ್ಲರ ವಿಚಾರಗಳನ್ನು ಕೇಳಿದ್ದೇನೆ. ಬಿಲ್‌ನ್ನು ಮಂಡನೆ ಮಾಡುವುದಕ್ಕೆ 7 ದಿವಸಗಳ ಮುಂಚಿತವಾಗಿಯೆ ನೋಟೀಸ್ ಕೊಟ್ಟಿದ್ದಾರೆಯೆ ಎಂದು ಮಾನ್ಯ ಸಿಂಧ್ಯರವರು ಕೇಳಿದರು. ಇದಕ್ಕೆ ನನ್ನ ಉತ್ತರ ಏನೆಂದರೆ ಮೊದಲು ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

I am very sorry when I am speaking how can you obstruct like that? ಅಧ್ಯಕ್ಷರು ಮಾತನಾಡುವಾಗ ನೀವು ಈ ರೀತಿಯಾಗಿ ಗಲಾಟೆ ಮಾಡಿದರೆ ಹೇಗೆ? ಇಷ್ಟು ಹೊತ್ತು ನಿಮ್ಮ ಮಾತನ್ನು ಕೇಳಿದ್ದೇನೆ, ನಾವು ಹೇಳುವುದನ್ನು ಕೂಡ ನೀವು ಕೇಳಬೇಕು.

ಶ್ರೀ ಬಿ.ಸೋಮಶೇಖರ್: ಈ ಸದನದ ಪರಂಪರೆಯನ್ನು ಮತ್ತು ಘನತೆಯನ್ನು ಎತ್ತಿ

ಹಿಡಿಯತಕ್ಕಂತಹ ಸಂಪೂರ್ಣವಾದಂತಹ ಜವಾಬ್ದಾರಿ ತಮ್ಮ ಮೇಲೆ ಇದೆ. ತಾವು ಏನೇ ಮಾತನಾಡಬೇಕಾದರೂ ಹಾಗೂ ಏನೇ ತೀರ್ಮಾನವನ್ನು ಕೊಡಬೇಕಾದರೂ ಹೌಸ್ ಆರ್ಡರ್‌ನಲ್ಲಿದ್ದಾಗ ಮಾತ್ರ ತಾವು ಕೊಡಬೇಕಾಗುತ್ತದೆ.

ಅಧ್ಯಕ್ಷರು: ಅದನ್ನು ಈಗ ನಾನು ಹೇಳಿಬಿಟ್ಟು ಮಾಡುತ್ತಿರುವುದು.

ಶ್ರೀ ಬಿ.ಸೋಮಶೇಖರ್: ಈ ಹೌಸ್‌ನಲ್ಲಿ ಒಂದು ಆರ್ಡರ್‌ನ್ನು ತಂದು ನಿರ್ಣಯವನ್ನು ಕೊಡಬೇಕು. ಇಲ್ಲದಿದ್ದರೆ ಇದು ಕೆಟ್ಟ ಸಂಪ್ರದಾಯವಾಗುತ್ತದೆ.

ಅಧ್ಯಕ್ಷರು: ಆಯಿತು ಒಳ್ಳೆಯ ಸಂಪ್ರದಾಯವನ್ನು ಮಾಡೋಣ.

(Interruptions)

ಮೊದಲನೆಯ ಪ್ರಶ್ನೆ 7 ದಿನ ಟೈಮ್ ಕೊಟ್ಟಿದ್ದಾರೆಯೇ? ಅದನ್ನು ವೇಳಪ್ ಮಾಡಿದ್ದೀರಾ ಎನ್ನುವುದು ಎರಡನೆಯ ಪ್ರಶ್ನೆ, ಅವರು 15ನೇ ತಾರೀಖಿಗೆ ಕೊಟ್ಟಿದ್ದಾರೆ. ಮಾನ್ಯ ಘೋರ್ಪಡೆಯವರು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಪತ್ರವನ್ನು ಬರೆದಿದ್ದಾರೆ; ಅದು ಇಲ್ಲಿದೆ. ಅದನ್ನು ವೇಆಫ್ ಮಾಡಿ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಅಜೆಂಡಾದಲ್ಲಿ ಎರಡು ದಿನಗಳಿಂದ ಬಿಲ್ ಬರುತ್ತಿವೆ. ಈಗ ತಾವೇನು ಹೇಳಿದ್ದೀರಿ, ನೀವು ಬಿಲ್‌ನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಮುಂಚೆಯೇ ಅಬ್ಜೆಕ್ಷನ್‌ನನ್ನು ಎತ್ತಿದ್ದೀರಿ. ರೂಲ್-81 ಏನು ಹೇಳುತ್ತದೆ ಎಂದರೆ ಅವರು ಇನ್ನು ಮೋಷನ್‌ನ್ನು ಮೂವ್ ಮಾಡಿಲ್ಲ, ಅವರು ಮೂವ್ ಮಾಡಿದ ಮೇಲೆ ಬೇಕಾದರೆ ನೀವು ಅಬ್ಜೆಕ್ಷನ್ ಮಾಡಿ, ಮೂವ್ ಮಾಡದೆ ನೀವು ವ್ಯಾಕ್ಯೂಮ್‌ನಲ್ಲಿ ಏನು ಮಾತನಾಡುತ್ತೀರಿ? You have got every right to speak only when the motion is moved. ಮೋಷನ್ ಮೂವ್ ಮಾಡದೆ ನೀವು ಹೇಗೆ ಅಬ್ಜೆಕ್ಷನ್ ಮಾಡುತ್ತೀರಿ? ನೀವೇನು ಹೇಳಿದಿರಿ the House is not in order. But there is a ruling. "Dharna or squatting on the floor of the House does not make the House out of order." ನಿನ್ನೆ ನಾನು ಹೇಳಲಿಲ್ಲ Even now, it is not too late. I request you to go to your seats.

(ಗೊಂದಲ)

ಮಾನ್ಯ ಸದಸ್ಯರು ಅವರವರ ಜಾಗಕ್ಕೆ ಹೋಗಬೇಕು, ಅವರು ಬಿಲ್‌ನ್ನು ಇಂಟ್ರಡ್ಯೂಸ್ ಮಾಡಲಿ ನಂತರ ನೀವು ಮಾತನಾಡಬೇಕು Speaker has got powers to waive of.... (interruptions) ಅವರು ಮೋಷನ್ನನ್ನು

ಮೂವ್ ಮಾಡಿಯೇ ಇಲ್ಲ, ನೀವು ಯಾವುದರ ಮೇಲೆ ಮಾತನಾಡುತ್ತೀರಿ? ನೀವು ವ್ಯಾಕ್ಯೂಮ್ ಮೇಲೆ ಮಾತನಾಡುತ್ತೀರಾ?

(ಗೊಂದಲ)

(ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಬಾವಿಯಿಂದ ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು): ಇವತ್ತು ಆ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿ ಅದನ್ನು ಪಾಸ್ ಮಾಡುವಂತಹ ಅವಶ್ಯಕತೆ ಏನು ಇಲ್ಲ. ಅದರ ಬಗ್ಗೆ ಎಲ್ಲರೂ ಕೂಡಿಕೊಂಡು ಸಾರಾಸಗಟಾಗಿ ವಿಚಾರ ಮಾಡೋಣ, ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಎಲ್ಲಾ ಇರುತ್ತದೆ, ಆದರೆ ಇವತ್ತು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದನವನ್ನು ಶಾಂತರೀತಿಯಿಂದ ನಡೆಸಿಕೊಂಡು ಹೋಗಬೇಕಾಗುತ್ತದೆ. ನಾವು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ.

MR.SPEAKER: That is why I am requesting the Hon'ble Members to take their seats.

ಶ್ರೀ ಜಗದೀಶ್ ಶೆಟ್ಟರ್: ಇನ್ನು ಕೆಲವೊಂದು ವಿಚಾರಗಳನ್ನು ಸಬ್‌ಮಿಷನ್ ಮಾಡುವಂತದ್ದು ಇರುತ್ತವೆ, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶವಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಮೋಷನ್ ಮೂವ್ ಮಾಡಲಿ, ನಂತರ ಆಮೇಲೆ ಮಾತನಾಡಬೇಕು ಮೋಷನ್ ಮೂವ್ ಮಾಡದೆ how can you speak in vaccum?ದಯವಿಟ್ಟು ಈಗಲಾದರೂ ಸದಸ್ಯರುಗಳು ತಮ್ಮ ತಮ್ಮ ಜಾಗಕ್ಕೆ ಹೋಗಬೇಕು. ಮೋಷನ್ ಮೂವ್ ಮಾಡಲಿ ಬೇಕಾದರೆ ನಂತರ ಬೇಕಾದಷ್ಟು ಮಾತನಾಡಬಹುದು. ಮಾನ್ಯ ಘೋರ್ಪಡೆಯವರೆ ತಾವು ಪ್ರಸ್ತಾಪವನ್ನು ಮಂಡಿಸಿ.

(ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾದ ಎಲ್ಲ ಸದಸ್ಯರುಗಳು ಧಿಕ್ಕಾರದ ಘೋಷಣೆಗಳನ್ನು ಕೂಗಿದರು)

(ಸದಸ್ಯರು ಸದನದ ಬಾವಿಯಲ್ಲಿ ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಿದ್ದರು, ಅದೇ ಸಮಯದಲ್ಲಿ ಮಾನ್ಯ ಘೋರ್ಪಡೆಯವರು ಬಿಲ್ ಮಂಡಿಸಿದರು)